## ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ

### ಸಿ ಸಿ ಸಂಖ್ಯೆ 73/2018

ಚಾಸಾ 3 ಫ್ರಾಸಾ 5

ಸಾಕ್ಷಿಯ ಹೆಸರು : ಶ್ರೀಮತಿ ಮುತ್ತಮ್ಮ

ಗಂಡನ ಹೆಸರು : ಮಾರುಸ್ವಾಮಿ

ವಯಸ್ಸು : 60 ವರ್ಷ

ಉದ್ಯೋಗ : ಕೂಲಿ

ವಾಸ ಸ್ಥಳ : ದೊಮ್ಮನಗದ್ದೆ ಗ್ರಾಮ, ಹನೂರು ತಾಲ್ಲೂಕು.

ದಿನಾಂಕ 27.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಗೆ ಕೇವಲ ತಮಿಳು ಭಾಷೆ ತಿಳಿದಿದ್ದರಿಂದ ಶ್ರೀ ಬಿ ಸೆಲ್ವರಾಜ್ ವಕೀಲರು ರವರನ್ನು ಭಾಷಾಂತಕರರಾಗಿ ನೇಮಿಸಲಾಯಿತು.

ಮುಖ್ಯ ವಿಚಾರಣೆಃ – ಮಾನ್ಯ ಸಸಅ ರವರಿಂದ

ಚಾಸಾ–1,2 4 ರಿಂದ 7 ರವರ ಪರಿಚಯ ನನಗೆ ಇರುತ್ತದೆ, ಅವರು ನಮ್ಮ ಗ್ರಾಮಸ್ಥರು. ಸುಮಾರು 10 ವರ್ಷಗಳ ಹಿಂದೆ ನಾನು, ನಮ್ಮ ಗ್ರಾಮಸ್ಥರು ಗ್ರಾಮದಿಂದ ಕೂಲಿ ಕೆಲಸಕ್ಕಾಗಿ ಅಜ್ಜೀಪುರಕ್ಕೆ ಹೋಗಿದ್ದು, ಸಂಜೆ 4–5 ಗಂಟೆ ಸಮಯದಲ್ಲಿ ಕೆಲಸ ಮುಗಿಸಿಕೊಂಡು ಆಟೋವಿನಲ್ಲಿ ವಾಪಸ್ಸು ಬರುತ್ತಿರಬೇಕಾದರೆ ಅಜ್ಜೀಪುರ ಗ್ರಾಮದಿಂದ ಸ್ವಲ್ಪ ದೂರದ ಬಳಿ ಒಂದು ಸರ್ಕಾರಿ ಬಸ್ ಬಂದು ಆಟೋಗೆ ಡಿಕ್ಕಿಪಡಿಸಿತು. ಅದರಿಂದ ಚಾಸಾ–2 ರವರಿಗೆ ಎರಡು ಬೆರಳುಗಳು ಕಟ್ ಆಗಿರುತ್ತದೆ. ನನಗೆ ತಲೆಗೆ ಏಟಾಗಿತ್ತು ಹಾಗೂ ನನಗೆ ಕಾಲಿಗೂ ಏಟಾಗಿತ್ತು. ನಂತರ ನಾನು ಕೌದಳ್ಳಿ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ನಾವು ಹೋಗುತ್ತಿದ್ದ ಆಟೋವಿಗೆ ಡಿಕ್ಕಿ ಪಡಿಸಿದ ವ್ಯಕ್ತಿಯನ್ನು ನೋಡಿ ಗುರುತಿಸಲು ಆಗುವುದಿಲ್ಲ. ನಾನು ರಾಮಾಪುರ ಪೊಲೀಸ್‌ರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾದ ಕಾರಣ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಗಿದೆ)**

**ಪಾಟೀ ಸವಾಲು : ಮಾನ್ಯ ಸ.ಸ.ಅ ರವರಿಂದಃ**

ನಾವು ದಿನಾಂಕ 12.09.2017 ರಂದು ಸಂಜೆ 5.30 ಗಂಟೆ ಸಮಯದಲ್ಲಿ ಕೆಎ–10–ಎ–1926

ಸಂಖ್ಯೆಯ ಆಟೋದಲ್ಲಿ ನಮ್ಮ ಗ್ರಾಮಕ್ಕೆ ಹೋಗುತ್ತಿದ್ದೆವು ಎಂದರೆ ಸರಿ. ಆ ಸಮಯದಲ್ಲಿ ಹುಡುಕುತೊರೆ ಡ್ಯಾಮ್ ಪಕ್ಕದ ಕಾಲುವೆ ಬೋರೆ ಬಳಿ ಈ ದಿನ ನ್ಯಾಯಾಲಯದ ಮುಂದೆ ನಿಂತಿರುವ ಆರೋಪಿಯು ಕೆಎ–10–ಎಫ್–16 ಕೆ.ಎಸ್.ಆರ್.ಟಿ.ಸಿ. ಬಸ್ ನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಆಟೋವಿಗೆ ಡಿಕ್ಕಿ ಪಡಿಸಿದರು ಎಂದರೆ ಸರಿ. ಆರೋಪಿಯ ವಿರುದ್ಧ ಚಾಸಾ–1 ರವರು ದೂರು ನೀಡಿರುತ್ತಾರೆ ಎಂದರೆ ಸರಿ. ನಾನು ಆಟೋ ಮತ್ತು ಅಪಘಾತಪಡಿಸಿದ ಬಸ್ ನ್ನು ನೋಡಿದರೆ ಗುರುತಿಸಿಸುತ್ತೇನೆ. ಸಾಕ್ಷಿಯು ತನಗೆ ತೋರಿಸಿದ ಪೋಟೋಗಳಲ್ಲಿರುವ ಆಟೋವನ್ನು ನೋಡಿ ಗುರುತಿಸಿ ಸದರಿ ಆಟೋವಿನಲ್ಲಿ ಅಪಘಾತವಾದ ದಿನ ನಾವು ಹೋಗುತ್ತಿದ್ದೆವು ಎಂದು ನುಡಿಯುತ್ತಾರೆ. ಸದರಿ ಪೊಟೋಗಳನ್ನು ಈಗಾಗಲೇ ನಿಪಿ–4 ಮತ್ತು 5 ಎಂದು ಗುರುತಿಸಲಾಯಿತು. ಸಾಕ್ಷಿಯು ತನಗೆ ತೋರಿಸಿದ ಪೋಟೋಗಳಲ್ಲಿರುವ ಬಸ್ ನ್ನು ನೋಡಿ ಗುರುತಿಸಿ ಸದರಿ ಬಸ್ಸು ನಮಗೆ ಅಪಘಾತಪಡಿಸಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪೊಟೋಗಳನ್ನು ಈಗಾಗಲೇ ನಿಪಿ–6 ಮತ್ತು 7 ಎಂದು ಗುರುತಿಸಲಾಯಿತು. ನಾನು ಅಪಘಾತವಾದ ದಿನ ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿರುತ್ತೇನೆ ಎಂದರೆ ಸರಿ .

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ.ಎಸ್.ಕೆ. ರವರಿಂದಃ**

ನಾವುಗಳು ಆಟೋವಿನಲ್ಲಿ 14 ಜನ ಕುಳಿತಿದ್ದೆವು. ನಾನು ಆಟೋವಿನಲ್ಲಿ ಬಲಭಾಗಕ್ಕೆ ಕುಳಿತಿದ್ದೆ. ಹುಡುಕುತೊರೆಯಿಂದ ಅಜ್ಜೀಪುರದ ಕಡೆ ಬರಬೇಕಾದರೆ ರಸ್ತೆ ಏರು (up) ಇರುತ್ತದೆ ಎಂದರೆ ಸರಿ. ನಾನು ಆಟೋವಿನಲ್ಲಿ ಬಲಭಾಗದಲ್ಲಿ ಕುಳಿತಿದ್ದ ಕಾರಣ, ಆಟೋವಿನಲ್ಲಿ ಹಲವು ಪ್ರಯಾಣಿಕರು ಇದ್ದ ಕಾರಣ ಮುಂದೆ ಬರುತ್ತಿದ್ದ ಹಾಗೂ ಹಿಂದೆ ಬರುತ್ತಿದ್ದ ವಾಹನಗಳು ನನಗೆ ಕಾಣುತ್ತಿರುಲಿಲ್ಲ ಎಂದರೆ ಸರಿ . ಆಟೋ ಬಿದ್ದು ನಾವು ಎದ್ದ ನಂತರವೇ ಏನಾಗಿರುತ್ತದೆ ಎಂದು ನಮಗೆ ತಿಳಿದಿದ್ದು ಅದಕ್ಕೆ ಪೂರ್ವದಲ್ಲಿ ಏನಾಗಿತ್ತು ಎಂದು ನಮಗೆ ತಿಳಿದಿರುವುದಿಲ್ಲ ಎಂದರೆ ಸರಿ. ನನಗೆ ಯಾವ ಕಾರಣಕ್ಕಾಗಿ ಗಾಯವಾಯಿತು ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. ದಿನಾಂಕ 12.09.2017ರ ನಂತರ ಪೊಲೀಸರು ನನ್ನ ಬಳಿ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ನಾನು ಇದೇ ಮೊದಲನೇ ಬಾರಿಗೆ ಆರೋಪಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವು ಆಟೋ ಚಾಲಕನ ನಿರ್ಲಕ್ಷತನದಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

ಆರೋಪಿಯು ತಮ್ಮ ಬಸ್ಸಿನಿಂದ ಯಾವುದೇ ಅಪಘಾತ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆದುಕೊಳ್ಳುವ ಸಲುವಾಗಿ ಚಾಸಾ–1,2, 4 ರಿಂದ 7 ರವರು ಮಾತನಾಡಿಕೊಂಡು ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ಭಾಷಾಂತಕರರಾದ ಶ್ರೀ ಬಿ ಸೆಲ್ವರಾಜ್ ವಕೀಲರು, ರವರು ಕನ್ನಡದಿಂದ ಸಾಕ್ಷಿಗೆ ತಮಿಳು ಭಾಷೆಗೆ ಭಾಷಾಂತರಿಕರಿಸಿ ನಂತರ ದೃಢಪಡಿಸಿಕೊಂಡು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಕೊಳ್ಳೇಗಾಲ.